# ಡಾ. ಶಾಂತರಸ

ಬರಗೂರರ ನಂತರ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೇರಿದವರು ಡಾ. ಶಾಂತರಸ ಹೆಂಬೇರಾಳು, ಕನ್ನಡ ಸಾಹಿತ್ಯದಲ್ಲಿ 'ಗಜಲ್' ಎಂದ ಕೂಡಲೇ ಮೊದಲು ನೆನಪಿಗೆ ಬರುವ ಹೆಸರೇ ಶಾಂತರಸ ಅವರದ್ದು.

ಕಾವ್ಯ, ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆ, ಗ್ರಂಥ ಸಂಪಾದನೆ, ಸಂಶೋಧನಾ ಪ್ರಬಂಧಗಳು, ಅನುವಾದ – ಹೀಗೆ ಇವರ ಸಾಹಿತ್ಯವೃಕ್ಷದ ರೆಂಬೆಗಳು ಹಲವಾರು.

೧೯೯೫ರ ಜೂ. ೧೯ರಂದು ಶಾಂತರಸ ಅವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಂಡರು. ಸಾಹಿತಿಗಳಾದ ಇವರ ಅವಧಿಯಲ್ಲಿನ 'ಕನ್ನಡದಲ್ಲಿ ವಚನ ಸಾಹಿತ್ಯ'ಕ್ಕೆ ವಿಶೇಷ ಮಹತ್ವವಿದೆ. ವಚನ ಸಾಹಿತ್ಯದ ಸವಿಯನ್ನು ಇತರ ಭಾಷಿಕರೂ ಪಡೆಯಲಿ ಎಂಬ ಉದ್ದೇಶದಿಂದ ಆಯ್ದ ಸುಮಾರು ೩೦೦ ವಚನಗಳನ್ನು ಮೊದಲು ಹಿಂದಿ ಭಾಷೆಗೆ ಅನುವಾದಿಸುವ ಸಲುವಾಗಿ ಒಂದು ಕಮ್ಮಟವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

ಗಜಲ್‌ಗಳು ಉರ್ದು ಸಾಹಿತ್ಯದ ಹೃದಯ ಮಿಡಿತವಿದ್ದಂತೆ, ಕನ್ನಡದಲ್ಲಿ ಉರ್ದು ಭಾಷೆಯಿಂದ ಅನುವಾದಗೊಂಡ ಗಜಲ್‌ಗಳು ದೊರೆಯುತ್ತವೆ. ಆದರೆ ಅವು ಕನ್ನಡದಲ್ಲಿ ಗಜಲ್ ಸಾಹಿತ್ಯ ಪ್ರಾಕಾರವನ್ನು ಜನಪ್ರಿಯಗೊಳಿಸುವಷ್ಟು ಪುನರ್ ಸೃಷ್ಟಿಸುವಲ್ಲಿ ಶಕ್ತವಾಗಿಲ್ಲ. ಈ ಕೊರತೆಯನ್ನು ಮನಗಂಡು ಕರ್ನಾಟಕ ಸಾಹಿತ್ಯ ಅಕಾಡೆಮಿ ಉರ್ದುವಿನಿಂದ ಆಯ್ದ ಪ್ರಸಿದ್ಧ ನೂರು ಗಜಲ್‌ಗಳು ಕನ್ನಡಕ್ಕೆ ಅನುವಾದಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿಶೇಷ ಘಟಕ ಯೋಜನೆಯಡಿಯಲ್ಲಿ ಚಿತ್ರದುರ್ಗದಲ್ಲಿ 'ಕನ್ನಡ ನಾಟಕ ಸಾಹಿತ್ಯದಲ್ಲಿ ದಲಿತರ ಸಂವೇದನೆ', ತುಮಕೂರಿನಲ್ಲಿ 'ದಲಿತ ಕಾವ್ಯ', ಮತ್ತು ಹೆಸರಘಟ್ಟದಲ್ಲಿ 'ಕನ್ನಡ ಕಥಾ ಸಾಹಿತ್ಯದಲ್ಲಿ ದಲಿತ ಸಂವೇದನೆ' ಕಮ್ಮಟಗಳು ನಡೆದವು. ಕಮ್ಮಟದ ಅಂಗವಾಗಿ ಅಕಾಡೆಮಿಯು ತನ್ನ ಮೊದಲ ಪ್ರಕಟಣೆಯಾಗಿ ಕೆ.ವಿ. ಸುಬ್ಬಣ್ಣ ಅವರ 'ಕುವೆಂಪುಗೆ ಪುಟ್ಟ ಕನ್ನಡಿ' ಎಂಬ ವಿಶಿಷ್ಟ ಕೃತಿಯನ್ನು ಪ್ರಕಟಿಸಿತು. ೧೯೯೬ರ ಏಪ್ರಿಲ್ ತಿಂಗಳಲ್ಲಿ ದಲಿತ ಸಾಹಿತಿಗಳ ಸಮಾವೇಶವು ದಲಿತ ಸಾಂಸ್ಕೃತಿಕ ಉತ್ಸವದಲ್ಲಿ ನಡೆಯಿತು. ಅಂದೇ ದಲಿತ ಕಾವ್ಯ ಮತ್ತು ದಲಿತ ಕಥೆಗಳು ಇವುಗಳ ಸಂಕಲನಗಳು ಬಿಡುಗಡೆಯಾದವು.

ಶಾಂತರಸ ಅವರ ಅಧ್ಯಕ್ಷತೆಯ ಅವಧಿಯಲ್ಲಿ ನಡೆದ ವಿಚಾರ ಸಂಕಿರಣಗಳೆಂದರೆ – ಗುಲ್ಬರ್ಗದಲ್ಲಿ ಕನ್ನಡದ ಮಹಾಕಾವ್ಯ ಅಧ್ಯಯನದ ನೆಲೆಗಳು, ಶಿವಮೊಗ್ಗೆಯಲ್ಲಿ ದ.ರಾ.ಬೇಂದ್ರೆ, ಶತಮಾನೋತ್ಸವ, ಬೆಂಗಳೂರಿನಲ್ಲಿ ಡಾ.ಯು.ಆರ್. ಅನಂತಮೂರ್ತಿ ಸಾಹಿತ್ಯ, ರಾಯಚೂರಿನಲ್ಲಿ ಕುವೆಂಪು ಸ್ಮೃತಿ, ಉಡುಪಿಯಲ್ಲಿ ಡಾ. ಎಂ. ಗೋಪಾಲಕೃಷ್ಣ ಅಡಿಗರ ಸಾಹಿತ್ಯ, ಮಂಡ್ಯದಲ್ಲಿ ಪ್ರೊ॥ ಎ.ಎನ್. ಮೂರ್ತಿರಾವ್ ಅವರ ಸಾಹಿತ್ಯ, ಸ್ವಾತಂತ್ರ್ಯ ಹೋರಾಟ ಮತ್ತು ಕನ್ನಡ ಕಾವ್ಯ, ಶಿವಪುರದ ಧ್ವಜ ಸತ್ಯಾಗ್ರಹ ಒಂದು ನೆನಪು, ಸ್ವತಂತ್ರಹಳ್ಳಿ ಈಸೂರು, ಹೈದ್ರಾಬಾದ್ ಕರ್ನಾಟಕ ಸ್ವಾತಂತ್ರ್ಯ ಚಳವಳಿ ಮುಂತಾದವು.